# ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆ ಕಲಬುರಗಿ.

## ಸಂಸ್ಥಾಪಕರ ಮನದಾಳದ ಮಾತು

ಆತ್ಮೀಯ ಓದುಗರೆ,
ಶ್ರೀಮತಿ ಅಂಬುಬಾಯಿ ವಸತಿಯುತ ಶಾಲೆಯನ್ನು ಈ ಜಾಲ ತಾಣದ ಮೂಲಕ ಪರಿಚಯಿಸಲು ನನಗೆ ಅತ್ಯಂತ ಹರ್ಷವೆನಿಸುತ್ತದೆ.

ದೃಷ್ಟಿಯನ್ನು ಕಳೆದುಕೊಂಡು ಹತಾಶನಾದ ನನಗೆ ನನ್ನ ಭವಿಷ್ಯವನ್ನು ರೂಪಿಸಿದ ಮಾತೋಶ್ರೀ ಅಂಬುಬಾಯಿಯವರು ಫೆಬ್ರುವರಿ 18, 2006ರಂದು ದೈವಾಧೀನರಾದರು. ಕತ್ತಲೆಯ ಬದುಕಿಗೆ ಬೆಳಕು ಕೊಟ್ಟ ಅವರ ಹೆಸರನ್ನು ಚಿರಸ್ಮರಣೀಯವಾಗಿರಿಸಬೇಕೆಂಬ ಹೆಬ್ಬಯಕೆಯು ನನ್ನ ಮನಸ್ಸಿನಲ್ಲಿ ಮೂಡಿತು. ಆದರೆ ಮನದಿಚ್ಛೆಯನ್ನು ಹೇಗೆ ಈಡೇರಿಸಬೇಕೆಂಬುದೇ ಒಂದು ದೊಡ್ಡ ಸವಾಲಾಗಿತ್ತು. ಆಗ ನನ್ನ ಮನದಲ್ಲಿ ಹೊಳೆದ ವಿಚಾರವೆಂದರೆ, ಅಂಧ ಮಹಿಳೆಯರಿಗೆ ಶಿಕ್ಷಣ ಕೊಡುವುದಕ್ಕಾಗಿ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಶಾಲೆಯಿರಲ್ಲಿಲ್ಲಾ ಅವರ ಹೆಸರಿನಲ್ಲಿ ಒಂದು ಶಾಲೆಯನ್ನು ಪ್ರಾರಂಭಿಸಬೇಕೆಂದು ದೃಢಸಂಕಲ್ಪ ಮಾಡಿದೆ.

ಆಗ ಎದುರಾದ ಸಮಸ್ಯೆಗಳು ಒಂದೆರಡಲ್ಲಾ ಅವೆಲ್ಲವನ್ನು ನೀಗಿಸಿಕೊಂಡು ನನ್ನ ಮನೆಯ ಒಂದು ಭಾಗದಲ್ಲಿ ಶಾಲೆಯನ್ನು ಪ್ರಾರಂಭಿಸಿದೆ. ವಿದ್ಯಾರ್ಥಿನಿಯರ ಊಟ ಉಪಚಾರಕ್ಕಾಗಿ ನನ್ನ ಸಂಬಳದಲ್ಲಿ ಅಷ್ಟಿಷ್ಟನ್ನು ಉಳಿಸಿ ವೆಚ್ಚವನ್ನು ಭರಿಸತೊಡಗಿದೆ. ನಂತರದ ಮೂರು ವರ್ಷಗಳವರೆಗೆ ಜಿಲ್ಲಾ ಪಂಚಾಯಿತಿಯಿಂದ ಸ್ವಲ್ಪ ಅನುದಾನವು ಬರತೊಡಗಿತು. ಆದರೆ ಈ ಶಾಲೆಗೆ ರಾಜ್ಯ ಸರಕಾರದಿಂದ ಅನುದಾನ ಪಡೆದುಕೊಳ್ಳಲು ಸಾಕಷ್ಟು ಹೋರಾಟ ಮಾಡಬೇಕಾಯಿತು.

ಮಾರ್ಚ 29 2011 ನಮ್ಮ ಶಾಲೆಯ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಿನ ಏಕೆಂದರೆ, ಅಂದು ರಾಜ್ಯ ಸರಕಾರವು ನಮ್ಮ ಬೇಡಿಕೆಯನ್ನು ಮನ್ನಿಸಿ ಪೂರ್ಣ ಪ್ರಮಾಣದ ಅನುದಾನವನ್ನು ಮಂಜೂರು ಮಾಡಿತು. ಹೀಗೆ ಅನೇಕ ಏಳು ಬೀಳುಗಳನ್ನು ಕಾಣುತ್ತಾ ಕಲ್ಲು ಮೂಳ್ಳುಗಳ ಹಾದಿಯಲ್ಲಿ ಪಯಣಿಸಿ ಸ್ನೇಹಿತರ, ಹಿತೈಷಿಗಳ ಸಹಾಯ ಸಹಕಾರದಿಂದ ಗುಲಬರ್ಗಾ ನಗರದಲ್ಲಿ ಈ ಶಾಲೆಯು ತಲೆಯೆತ್ತಿ ನಿಂತಿತು.

ಮುಂದಿನ ದಿನಗಳಲ್ಲಿ ಈ ಶಾಲೆಯನ್ನು ಕೇವಲ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ಇಡೀ ಭಾರತದಲ್ಲಿಯೇ ವೈಶಿಷ್ಟಮಯವಾದ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಬೇಕೆಂಬುದು ನನ್ನ ಆಸೆಯಾಗಿದೆ. ಇದು ಕೇವಲ ತಮ್ಮೆಲ್ಲರ ಸಹಕಾರದಿಂದ ಮಾತ್ರ ಸಾಧ್ಯ. ಈ ಸಂಸ್ಥೆಯು ಉನ್ನತ ಮಟ್ಟಕೇರಲು ಹಿಂದಿನಂತೆ ಮುಂದೆಯು ಸಹ ತಾವುಗಳು ಸಹಾಯ, ಸಹಕಾರದ ಅಮೃತ ಹಸ್ತವನ್ನು ನೀಡುತ್ತಿರಿ ಎಂದು ನಾನು ಆಶಿಸುತ್ತೇನೆ.

ಧನ್ಯವಾದಗಳೊಂದಿಗೆ,

ಇಂತಿ
ದತ್ತು ಅಗರವಾಲ್.

# ನಮ್ಮ ಶಾಲೆ.

ಪೂಜ್ಯ ಶ್ರೀಶರಣಬಸವೇಶ್ವರರ ಹಾಗೂ ಸೂಫಿ ಸಂತ ಹಜರತ ಖಾಜಾ ಬಂದೇನವಾಜರ ಕರ್ಮಭೂಮಿ ಕಲಬುರ್ಗಿ. ಬಹುಮನಿ ಸುಲ್ತಾನರ ರಾಜಧಾನಿಯಾಗಿ ಮೆರೆದು ನಂತರ ನಿಜಾಮರ ಆಡಳಿತ ಕಾಲದಲ್ಲಿ ವಿಭಾಗೀಯ ಕೇಂದ್ರವಾಗಿ ಸಾಮಾಜಿಕ, ಶೈಕ್ಷಣಿಕ, ಸಂಸ್ಕೃತಿಕ, ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಹಿರಿಮೆ ಪಡೆದ ಐತಿಹಾಸಿಕ ನಗರ ಕಲಬುರ್ಗಿ. ಕರ್ನಾಟಕ ಏಕಿಕರಣದ ನಂತರ ಹೈದ್ರಬಾದ ಕರ್ನಾಟಕ ಪ್ರದೇಶವೆಂದು ಕರೆಯಲಾಗುವ ಆರು ಜಿಲ್ಲೆಗಳ ಪೈಕಿ ಪ್ರಾಮುಖ್ಯತೆಯನ್ನು ಪಡೆದುಕೊಂಡ ಮಹಾನಗರ ಕಲಬುರ್ಗಿ.

ಕಿತ್ತು ತಿನ್ನುವ ಬಡತನ, ದಾರಿದ್ರ್ಯ ಪ್ರಾದೇಶಿಕ ಅಸಮಾನತೆ ರಾಜ್ಯದಲ್ಲಿ ಆಡಳಿತ ನಡೆಸಿದ ವಿವಿಧ ಸರ್ಕಾರಗಳು ಕೊಟ್ಟ ಬಳುವಳಿಯಿಂದಾಗಿ ಶಾಶ್ವತವಾಗಿ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಹೊತ್ತಿರುವದು ಇಲ್ಲಿಯ ಜನರ ದೌರ್ಭಾಗ್ಯ

ನಿರುದ್ಯೋಗ, ಅನಕ್ಷರತೆ, ಇಲ್ಲಿನ ಜನರ ದಿನನಿತ್ಯದ ಸಮಸ್ಯೆಗಳು ವಿಕಲಚೇತನರೂ ಸಹ ಈ ಸಮಸ್ಯೆಗಳಿಗೆ ಹೊರತಾಗಿಲ್ಲ. ಇದನ್ನು ಮನಗಂಡ ಕೆಲವು ಅಂಗವಿಕಲರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಹೈದ್ರಬಾದ ಕರ್ನಾಟಕ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘವನ್ನು 1990ರಲ್ಲಿ ಸ್ಥಾಪಿಸಿದರು. ವಿವಿಧ ಸ್ವರೂಪದ ಅಂಗವಿಕಲತೆಯನ್ನು ಹೊಂದಿರುವ ಜನರಿಗೆ ನ್ಯಾಯವನ್ನು ದೊರಕಿಸಿಕೊಡುವದು, ಅವರ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಸ್ಥಾಪಿಸುವದು, ಅವರ ಪುನರ್ವಸತಿಗಾಗಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವದು, ಹಾಗೂ ಅಂಗವಿಕಲರ ಹಕ್ಕುಗಳ ರಕ್ಷಣೆ, ಈ ಸಂಘದ ಧ್ಯೆಯೋದ್ಧೇಶಗಳಾಗಿವೆ. ವಿಕಲಚೇತನ ಮಹಿಳೆಯರ ಶೈಕ್ಷಣಿಕ ಅವಶ್ಯಕತೆಗಳನ್ನು ಅರಿತುಕೊಂಡ ಈ ಸಂಘ ಕಲಬುರ್ಗಿ ಮಹಾನಗರದಲ್ಲಿ ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯನ್ನು ಸ್ಥಾಪಿಸಿದೆ.

## ಹಿನ್ನೆಲೆ

ಭಾರತದಲ್ಲಿ ಮಹಿಳೆಯರ ಪರಿಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಅದರಲ್ಲಿಯೂ ಅಂಧ ಹೆಣ್ಣು ಮಕ್ಕಳ ಸ್ಥಿತಿಯು ಅತ್ಯಂತ ದಯಾನೀಯವಾಗಿದೆ. ಇವರಿಗೆ ಒಳ್ಳೆಯ ಶಿಕ್ಷಣ ತರಬೇತಿ, ಉದ್ಯೋಗ ಅವಕಾಶಗಳು ದೊರಕಿಸಿಕೊಟ್ಟರೆ ಇತರರಂತೆ ಸಬಲರಾಗಿ ಸ್ವಾವಲಂಬಿ ಜೀವನ ನಡೆಸಬಲ್ಲರು ಈ ನಿಟ್ಟಿನಲ್ಲಿ ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯು ಶ್ರಮಿಸುತ್ತಿದೆ. ಈ ಹಿಂದೆ ಗುಲಬರ್ಗಾ ನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂಧ ಹೆಣ್ಣು ಮಕ್ಕಳ ಖಾಸಗಿ ಶಾಲೆಯನ್ನು ಅದರ ಆಡಳಿತ ಮಂಡಳಿಯವರು ಹಠಾತ್ತನೆ ಮುಚ್ಚಿ ಬಿಟ್ಟದ್ದರು. ಇದರ ಪರಿಣಾಮವಾಗಿ ಅಂಧ ಬಾಲಕಿಯರ ಸ್ಥಿತಿ ಡೋಲಾಯಮಾನವಾಯಿತು. ಅಲ್ಲದೆ ಅವರ ಪಾಲಕರ ನೆಮ್ಮದಿಯನ್ನು ಹಾಳುಮಾಡಿತು. ಅಂಧ ಬಾಲಕಿಯರ ಮತ್ತು ಪಾಲಕರ ದುರ್ದಸೆಯನ್ನು ಮನಗಂಡು ಹೈದ್ರಾಬಾದ ಕರ್ನಾಟಕ ಅಂಗವಿಕಲರ ಕ್ಷೇಮಾಭವೃದ್ಧಿ ಸಂಘವು

ಅಂಧ ಹೆಣ್ಣುಮಕ್ಕಳ ಸಲುವಾಗಿ ಹೊಸದಾದ ಶಾಲೆಯನ್ನು ಪ್ರಾರಂಭಿಸುವ ಕಾರ್ಯಕ್ಕೆ ಕೈ ಹಾಕಿತು. ತತ್ಪರಿಣಾಮವಾಗಿ ಗುಲಬರ್ಗಾ ನಗರದಲ್ಲಿ 2007 ರಲ್ಲಿ ಕರ್ನಾಟಕ ಸರಕಾರದ ಅಂಗವಿಕಲರ ಕಲ್ಯಾಣ ಇಲಾಖೆಯ ಅನುಮತಿಯನ್ನು ಪಡೆದು ಶ್ರೀಮತಿ ಅಂಬುಬಾಯಿ ಅಂಧ ಬಾಲಕಿಯರ ವಸತಿಯುತ ಶಾಲೆಯು ಅಸ್ತಿತ್ವಕ್ಕೆ ಬಂದಿತು. ಸ್ವತ: ಅಂಧರಾಗಿರುವ ಶ್ರೀದತ್ತು ಅಗರವಾಲರವರು ಅವರ ಮಾತೋಶ್ರೀ ದಿವಂಗತ ಅಂಬುಬಾಯಿಯವರ ಸ್ಮರಣಾರ್ಥವಾಗಿ ಈ ಶಾಲೆಯನ್ನು ಸ್ಥಾಪಿಸಿದರು.

## ಶಾಲೆಯ ಪ್ರವೇಶ ನಿಯಮಗಳು

1) ಪ್ರತಿವರ್ಷ ಜೂನ 1ರಿಂದ 31ರವರೆಗೆ ಯಾವುದೇ ಜಾತಿ, ವರ್ಗ, ಅಂತಸ್ತುಗಳ, ಭೇದವಿಲ್ಲದೆ ಅಂಧ ಬಾಲಕಿಯರಿಗೆ ಉಚಿತವಾಗಿ ದಾಖಲಾತಿ.

2) ಮಕ್ಕಳನ್ನು ದಾಖಿಲು ಮಾಡಲು ನೇತ್ರತಜ್ಞ ವೈದ್ಯರ ಪ್ರಮಾಣಪತ್ರ, ಪಾಲಕರ ಆದಾಯ ಪ್ರಮಾಣಪತ್ರ, ಜನ್ಮ ಪ್ರಮಾಣಪತ್ರ ಮತ್ತು ಪಾಸಪೋರ್ಟಅಳತೆಯ 3 ಭಾವಚಿತ್ರಗಳನ್ನು ತರಬೇಕು.

3) ಇಲ್ಲಿ ಉಚಿತ ವಸತಿ, ಆಹಾರ, ಶಿಕ್ಷಣ,ಪಠ್ಯಪುಸ್ತಕ, ಹಾಗೂ ಸಮವಸ್ತ್ರವನ್ನು ನೀಡಲಾಗುತ್ತದೆ.

## ಪಠ್ಯಕ್ರಮ

ಸಾಮಾನ್ಯ ಶಾಲೆಗಳು ಅನುಸರಿಸುವ ಪಠ್ಯಕ್ರಮವನ್ನೇ ಇಲ್ಲಿಯೂ ಸಹ ಅಳವಡಿಸಿಕೊಳ್ಳಲಾಗಿದೆ. ಅಂಧ ಮಕ್ಕಳಿಗೆ ಶಿಕ್ಷಣ ನೀಡುವ ತರಬೇತಿ ಹೊಂದಿದ ತಜ್ಞ ಶಿಕ್ಷಕರಿದ್ದಾರೆ. ಪಠ್ಯ ವಿಷಯಗಳ ಜೊತೆಗೆ ಸಂಗೀತ,ಕರಕುಶಲತೆ, ದೈಹಿಕಶಿಕ್ಷಣ, ಯೋಗಾಭ್ಯಾಸ, ಇತ್ಯಾದಿಗಳನ್ನು ಹೆಚ್ಚುವರಿಯಾಗಿ ಕಲಿಸಲಾಗುತ್ತದೆ.

## ಕಂಪ್ಯುಟರ ಶಿಕ್ಷಣ

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಜಗತ್ತು ಅಗಾಧವಾದ ಪ್ರಗತಿಯನ್ನು ಸಾಧಿಸಿದೆ. ಇದು ಕಂಪ್ಯುಟರ ಯುಗ ಪರಾವಲಂಬಿಗಳಾಗಿದ್ದ ಅಂಧರು ಇಂದು ಕಂಪ್ಯುಟರ ಶಿಕ್ಷಣವನ್ನು ಪಡೆದುಕೊಂಡು ಸ್ವಾವಲಂಬಿಗಳಾಗಿ ಬದುಕುತ್ತಿದಾರೆ. The Freedom Scientific ಎಂಬ ಅಂತರ ರಾಷ್ಟೀಯ ಸಂಸ್ಥೆಯು ದೃಷ್ಟಿದೊಷವುಳ್ಳವರಿಗಾಗಿ Job Accessed With Speech.(JAWS) ಎಂಬ ತಂತ್ರಾಂಶವನ್ನು ಕಂಡು ಹಿಡಿದಿದೆ.

ಇದನ್ನು ಬಳಸಿಕೊಂಡು ಅಂಧರು ಸಹ ಗಣಕಯಂತ್ರದಲ್ಲಿ ಪ್ರಗತಿಯನ್ನು ಸಾಧಿಸುತ್ತಿದಾರೆ. ಇದರಿಂದ ಉದ್ಯೋಗವಕಾಶಗಳು ಹೆಚ್ಚಿವೆ. ಈ ನಿಟ್ಟಿನಲ್ಲಿ ನಮ್ಮ ಶಾಲೆಯಲ್ಲಿ ಗಣಕಯಂತ್ರ ಪ್ರಯೋಗಾಲಯವನ್ನು ಸ್ಥಾಪಿಸಲಾಗಿದೆ.

## ಪಠ್ಯೇತರ ಚಟುವಟಿಕೆಗಳು

ಮಕ್ಕಳ ಶಾರೀರಿಕ ಮತ್ತು ಭೌತಿಕ ಅಭಿವೃದ್ಧಿಗೆ ಪಠ್ಯೇಭ್ಯಾಸವಲ್ಲದೇ ಸಾಂಸ್ಕೃತಿಕ ಕಲೆಗಳು ಪೂರಕವೆಂದು ಮನಗಂಡುನಮ್ಮ ಶಾಲೆಯಲ್ಲಿಕ್ರೀಡೆ,ಸಂಗೀತವಾದ್ಯಗಳನುಡಿಸುವಿಕೆ,ಹಾಡುಗರಿಕೆ,ಅಭಿನಯ,ಭಾಷಣ,ಚರ್ಚೆ, ಮುಂತಾದವುಗಳನ್ನು ವಿಶೇಷ ತರಭೇತಿಯ ಮೂಲಕ ಕಲಿಸಿ ಆಸಕ್ತಿಯಿರುವ ಮಕ್ಕಳಿಗೆ ಪ್ರೋತ್ಸಾಹಿಸಲಾಗುತ್ತದೆ.

## ವಿದ್ಯಾರ್ಥಿನಿಯರಿಗೆ ನಾಯಕತ್ವದ ತರಭೇತಿ

ನಾವು ಪ್ರಜಾಪ್ರಭುತ್ವದ ಯುಗದಲ್ಲಿದ್ದೇವೆ. ಇದರ ಲಕ್ಷಣ ವಿಶೇಷತೆ ತಿಳಿದುಕೊಳ್ಳಲು ಮಕ್ಕಳಲ್ಲಿಯೇ ಒಂದು ಸಂಸತ್ತು ನಿರ್ಮಿಸಿ ಅವರಲ್ಲಿ ವಿವಿಧ ಜವಾಬ್ದಾರಿಯನ್ನು ಹಂಚಿ ಆರೋಗ್ಯಕರ ಸ್ಪರ್ಧಾ ಭಾವನೆಯಿಂದ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡಲಾಗುತ್ತದೆ. ಪ್ರತಿವರ್ಷವೂ ಚುನಾವಣೆಯನ್ನು ನಡೆಸಿ ವಿದ್ಯಾರ್ಥಿನಿಯರ ಮಂತ್ರಿ ಪರಿಷತ್ತನ್ನು ರಚಿಸಲಾಗುತ್ತದೆ. ಅದೇ ರೀತಿ ವಿದಾರ್ಥಿನಿಯರ ಸಮೂಹವನ್ನು ಐದು ಗುಂಪುಗಳಲ್ಲಿ ವಿಂಗಡಿಸಿ ಆ ಗುಂಪುಗಳಿಗೆ ಕರ್ನಾಟಕದಲ್ಲಿ ಹರಿಯುವ ಪ್ರಮುಖ ನದಿಗಳಾದ ಶರಾವತಿ, ಕೃಷ್ಣ, ಕಾವೇರಿ, ತುಂಗಾ, ಭೀಮಾ ಎಂದು ಹೆಸರಿಸಲಾಗಿದೆ. ಪ್ರತಿಯೊಂದು ಗುಂಪಿಗೆ ಒಬ್ಬ ವಿದ್ಯಾರ್ಥಿನಿ ನಾಯಕಿಯಾಗಿದ್ದು ಅವಳು ಆ ಗುಂಪಿನ ಶಿಸ್ತನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿರುತ್ತಾಳೆ.

## ಶಾಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳು

ನಮ್ಮಲ್ಲಿ ವಸತಿ ಸೌಲಭ್ಯವಿದ್ದು ಊಟದ ಕೋಣೆ, ತರಗತಿಕೋಣೆ, ಆಟದ ಮೈದಾನ, ಹಗಲುರಾತ್ರಿ ಸತತವಾಗಿ ಬಿಸಿ ನೀರಿನ ಸೌಲಭ್ಯ, ಶುದ್ದ ಕುಡಿಯುವ ನೀರಿನ ಸೌಲಭ್ಯಗಳಿದ್ದು ಅನುಕೂಲಕರವಾದ ಪ್ರತ್ಯೇಕತೆಯನ್ನು ಅನುಭವಿಸಲು ಶೌಚಾಲಯಗಳಿವೆ. ಬೆಳಗಿನ ಉಪಹಾರ, ಮಧ್ಯಾನದ ಊಟ, ರಾತ್ರಿ ಊಟವಿದ್ದು, ಪೌಷ್ಟಿಕತೆ, ರುಚಿ, ಶುಚಿ, ಮೂರನ್ನು ಒಳಗೊಂಡಿರುತ್ತದೆ. ಧರಿಸಲು ಸಮವಸ್ತ್ರ ಹಾಸಿಗೆ, ಹೊದಿಕೆಗಳನ್ನು ಮಕ್ಕಳಿಗೆ ಉಚಿತವಾಗಿ ನೀಡಲಾಗುತ್ತದೆ.

## ಸಿಬ್ಬಂದಿ ವ್ಯವಸ್ಥೆ.

ನಮ್ಮ ಶಾಲೆಯಲ್ಲಿ 4ಜನ ವಿಷಯ ಶಿಕ್ಷಕರು, 01ಸಂಗೀತ ಶಿಕ್ಷಕರು, 01ದೈಹಿಕಶಿಕ್ಷಕರು ಹಾಗೂ 01ಕರಕುಶಲ ಶಿಕ್ಷಕರು ಹೀಗೆ ಒಟ್ಟು 7ಜನ ಶಿಕ್ಷಕರು, ಒಬ್ಬ ಗೃಹಪಾಲಕಿ ಮತ್ತು ಒಬ್ಬ ದ್ವಿತಿಯ ದರ್ಜೆಸಹಾಯಕಿ ಕಾರ್ಯನಿರ್ವವಹಿಸುತ್ತಿದ್ದಾರೆ. ಇಷ್ಟೇ ಅಲ್ಲದೇ ವಸತಿನಿಲಯದ ನಿರ್ವಹಣೆಗಾಗಿ ಅಡಿಗೆಯವರು ಆಯಾ ಹಾಗೂ ಜವಾನರನ್ನು ನೇಮಿಸಿಕೊಳ್ಳಲಾಗಿದೆ. ಭದ್ರತಾ ಸಿಬ್ಬಂದಿಯವರು ಅಹೋರಾತ್ರಿ ಶಾಲೆಗೆ ರಕ್ಷಣೆಯನ್ನು ಒದಗಿಸುತ್ತಿದ್ದಾರೆ. ಇಲ್ಲಿನ ಎಲ್ಲಾ ಸಿಬ್ಬಂದಿಯವರು ನಿಸ್ವಾರ್ಥವಾಗಿ ಮಕ್ಕಳ ಸರ್ವತೋಮುಖ ಏಳಿಗೆಯ ದೃಷ್ಟಿಯಿಂದ ಪ್ರಾಮಾಣಿಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ.